ದಿನಾಂಕಃ 08.06.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಬಿ.ಎನ್.ವಿ. ವಕೀಲರಿಂದ:**

ಭೋಗ್ಯ ಕರಾರು ಪತ್ರಕ್ಕೆ ನಾನು, ಕಿರಣ್ ಮತ್ತು ರಾಜೀವ್ ಲಾಯರ್ ಸಹಿ ಮಾಡಿರುತ್ತೇವೆ. ಕರಡು ಪ್ರತಿಯನ್ನು ತಯಾರಿಸಿದವರು ಸಹಿ ಮಾಡಿರುವುದಿಲ್ಲ. ದಾವಾ ಅನುಸೂಚಿಯಲ್ಲಿ ತೋರಿಸಿರುವ ಚೆಕ್ಕುಬಂದಿಗು ಮತ್ತು ನಿಪಿ-1 ರಲ್ಲಿ ನಮೂದಿಸಿರುವ ಚೆಕ್ಕುಬಂದಿಗೂ ವ್ಯತ್ಯಾಸವಿರುತ್ತದೆ ಎಂದರೆ ಸರಿಯಲ್ಲ. ಶೆಡ್ಯೂಲ್ ಸ್ವತ್ತನ್ನು ನವೀಕರಿಸಲು ಪ್ರತಿವಾದಿಯವರು ರೂ.5,00,000/- ಹಣವನ್ನು ವೆಚ್ಚ ಮಾಡಿರುತ್ತಾರೆ ಎಂದರೆ ಸರಿ. ಪ್ರತಿವಾದಿಯವರನ್ನು ಅನುಸೂಚಿ ಸ್ವತ್ತಿನಿಂದ ಹೊರಹಾಕಲು ನಾವು ಯಾವುದೇ ರೀತಿಯ ಕಾನೂನು ಕ್ರಮವನ್ನು ಕೈಗೊಂಡಿರುವುದಿಲ್ಲ ಕೇವಲ ಬಾಯಿ ಮಾತಿನಲ್ಲಿ ತಿಳಿಸಿರುತ್ತೇವೆ. ದಿ.15.08.2024 ರಂದು ನಾನು ಪ್ರತಿವಾದಿಯವರಿಗೆ ಅನುಸೂಚಿ ಸ್ವತ್ತನ್ನು ಖಾಲಿ ಮಾಡುವಂತೆ ನೋಟೀಸನ್ನು ನೀಡಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಸದರಿ ನೋಟೀಸಿನ ಪ್ರತಿಯನ್ನು ತೋರಿಸಲಾಗಿ ಸಾಕ್ಷಿಯು ಸದರಿ ನೋಟೀಸನ್ನು ಒಪ್ಪಿರುತ್ತಾರೆ ಆದ ಕಾರಣ ಸದರಿ ನೋಟೀಸನ್ನು ನಿಡಿ-1 ಎಂದು ಗುರುತಿಸಲಾಯಿತು. ನಾನು ಪ್ರತಿವಾದಿಯವರಿಗೆ ನೀಡಿರುವ ನೋಟೀಸಿಗೆ ಪ್ರತ್ಯುತ್ತರವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪ್ರತ್ಯುತ್ತರದಲ್ಲಿ ಪ್ರತಿವಾದಿಯವರು ಹೆಚ್ಚಿನದಾಗಿ ರೂ.8,00,000/- ಗಳಿಗೆ ಭೋಗ್ಯವನ್ನು ಮುಂದುವರೆಸುವುದಾಗಿ ತಳಿಸಿರುತ್ತಾರೆ ಎಂದರೆ ಸರಿಯಲ್ಲ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ವಾದಿಯವರು ನೀಡಿರುವ ನೋಟೀಸಿಗೆ ಪ್ರತಿವಾದಿಯವರು ನೀಡಿರುವ ಪ್ರತ್ಯುತ್ತರದ ಪ್ರತಿ ಎಂದರೆ ಸರಿಯಲ್ಲ. ಸಾಕ್ಷಿಯು ಸದರಿ ಪ್ರತಿಯ ಮೇಲಿರುವ ಸಹಿಯನ್ನು ಗುರುತಿಸಲು ನಿರಾಕರಿಸಿರುತ್ತಾರೆ. ಪ್ರತಿವಾದಿಯವರು ಕಾನೂನು ಬಾಹಿರ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ ಎಂದು ಟಿ.ವಿ.ಯಲ್ಲಿ ನೋಡಿ ಅವರ ವಿರುದ್ಧ ಪೋಲಿಸ್ ಠಾಣೆಯಲ್ಲಿ ದೂರನ್ನು ದಾಖಲಿಸಿರುತ್ತೇನೆ. ಸದರಿ ವಿಡಿಯೋ ಚಿತ್ರೀಕರಣವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಿ.16.10.2024 ರಂದು ನಾನು ಕಳಸ ಪೋಲಿಸ್ ಠಾಣೆಯಲ್ಲಿ ಒಂದು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ಅನುಸೂಚಿ ಸ್ವತ್ತಿನಲ್ಲಿ ಕಾನೂನು ಬಾಹಿರ ಚಟುವಟಿಕೆಗಳು ನಡೆಯುತ್ತಿದೆ ಎಂಬುದರ ಕುರಿತು ದೂರನ್ನು ನೀಡಿರುತ್ತೇನೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ಗುರುತಿಸಿದ ಮೇರೆಗೆ, ಸದರಿ ದಾಖಲಾತಿಯನ್ನು ನಿಡಿ-2 ಎಂದು ಗುರುತಿಸಲಾಯಿತು. ಕಳಸ ಪೋಲಿಸ್ ಠಾಣೆಯನ್ನು ಹೊರತುಪಡಿಸಿ ಜಿಲ್ಲಾ ಪೋಲಿಸ್ ಠಾಣೆಯಲ್ಲಿ ಒಂದು ದೂರನ್ನು ದಾಖಲಿಸಿರುತ್ತೇನೆ. ಸದರಿ ದೂರಿನಲ್ಲಿ ಯಾವ ವಿಷಯವನ್ನು ನಮೂದಿಸಿರುತ್ತೇನೆ ಎಂದು ನೆನಪಾಗುತ್ತಿಲ್ಲ.

ದಿ.06.11.2025 ರಂದು ಪ್ರತಿವಾದಿಯವರ ವಿರುದ್ಧ ಗಾಂಜಾ, ಡ್ರಕ್ಸ್, ವ್ಯಭಿಚಾರ ಮತ್ತು ಇಸ್ಪಿಟ್ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ ಎಂದು ಸುಳ್ಳು ದೂರನ್ನು ನೀಡಿರುತ್ತೀರಾ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ಜಿಲ್ಲಾ

ಪೋಲಿಸ್ ಠಾಣೆಯಲ್ಲಿ ಪ್ರತಿವಾದಿಯವರ ವಿರುದ್ಧ ದಾಖಲಿಸಿರುವ ದೂರಿನ ಪ್ರತಿ ಎಂದು ತೋರಿಸಲಾಗಿ ಸಾಕ್ಷಿಯು ಒಪ್ಪಿದ್ದು ಅದನ್ನು ನಿಡಿ-3 ಎಂದು ಗುರುತಿಸಲಾಯಿತು. ಸದರಿ ದೂರಿಗೆ ಸಂಬಂಧಿಸಿದಂತೆ ಕೊಪ್ಪದ ಡಿ.ವೈ.ಎಸ್.ಪಿ. ರವರು ನನ್ನ ಹೇಳಿಕೆಯನ್ನು ದಾಖಲು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಪ್ರತಿವಾದಿಯವರು ರೂ.8,00,000/- ಹಣವನ್ನು ನೀಡಿ ಭೋಗ್ಯವನ್ನು ಮುಂದುವರೆಸಲು ತಯಾರಿದ್ದರೂ ಸಹಾ ಡಿ.ವೈ.ಎಸ್.ಪಿ. ರವರ ಎದುರು ಪ್ರತಿವಾದಿಯವರು ಯಾವ ಹಣವನ್ನು ನೀಡಲು ಮುಂದಾಗಿರುವುದಿಲ್ಲ ಎಂದು ಸುಳ್ಳು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ಡಿ.ವೈ.ಎಸ್.ಪಿ ರವರ ಎದುರು ನೀಡಿರುವ ಪ್ರತಿ ಎಂದರೆ ಸಾಕ್ಷಿಯು ಒಪ್ಪಿದ್ದು ಅದನ್ನು ನಿಡಿ-4 ಎಂದು ಗುರುತಿಸಲಾಯಿತು. ಪ್ರತಿವಾದಿಯವರನ್ನು ಅನುಸೂಚಿ ಸ್ವತ್ತಿನಿಂದ ಹೊರ ಹಾಕುವ ದುರುದ್ದೇಶದಿಂದ ಅವರ ವಿರುದ್ಧ ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಪ್ರತಿವಾದಿಯವರಿಗೆ ಹಾನಿ ಮಾಡುವ ಉದ್ದೇಶದಿಂದ ನಾನು ಮತ್ತು ನನ್ನ ಗಂಡ ಊರಿನಲ್ಲಿ ಸುಳ್ಳು ಪ್ರಚಾರ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಸದರಿ ಮಾನ ಹಾನಿಯಿಂದಾಗಿ ಪ್ರತಿವಾದಿಯವರು ದಿ.17.12.2025 ರಂದು ಕಳಸ ಪೋಲಿಸ್ ಠಾಣೆಯಲ್ಲಿ ಒಂದು ದೂರನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದೂರಿನ ಅನ್ವಯ PCR.34/2026 ರಡಿಯಲ್ಲಿ ಒಂದು ಪ್ರಕರಣವನ್ನು ದಾಖಲು ಮಾಡಿರುತ್ತಾರೆ ಎಂದರೆ ನನಗೆ ತಿಳಿದಿರುವುದಿಲ್ಲ. ಭೋಗ್ಯ ಕರಾರಿನ ಅನ್ವಯ ನಾನು ನಡೆದುಕೊಂಡಿರದ ಕಾರಣ ಪ್ರಕರಣವನ್ನು ದಾಖಲಿಸಲು ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಭೋಗ್ಯ ಕರಾರಿನ ನಿಯಮಾನುಸಾರ ನಾನು ದಾವೆಯನ್ನು ಹೂಡಿರದ ಕಾರಣ ನನಗೆ ಯಾವುದೇ ಪರಿಹಾರವನ್ನು ಪಡೆಯುವ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲಾತಿಗಳು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.